# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು

## ಅಧಿಸೂಚನೆ ಸಂಖ್ಯೆ ಡಿ/07/ಎಎಂಡಿ/5, ದಿನಾಂಕ 25ನೇ ಮಾರ್ಚ್ 2005

## ಕವಿನಿ ಆಯೋಗ (ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗಾಗಿ ಲೈಸೆನ್ಸುದಾರರ ಕರ್ತವ್ಯಗಳು) ವಿನಿಯಮಗಳು, 2004 ಕ್ಕೆ ತಿದ್ದುಪಡಿ

ಪೀಠಿಕೆ:

ವಿದ್ಯುಚ್ಛಕ್ತಿ ಅಧಿನಿಯಮ 2003(2003ರ ಕೇಂದ್ರ ಕಾಯಿದೆ 36)ರ ಪರಿಚ್ಛೇದ 181ರ ಉಪ ಪರಿಚ್ಛೇದ (2) ರ ಖಂಡ (ಟಿ) ಮೂಲಕ ದತ್ತವಾದ ಅಧಿಕಾರ ಹಾಗೂ ಪರಿಚ್ಛೇದ 43ರ ಉಪ ಪರಿಚ್ಛೇದ (1)ರ ಅನುಸರಣೆಯಾಗಿ, ಹಾಗೂ ಇದರ ಪರವಾಗಿ ಎಲ್ಲ ಅಧಿಕಾರಗಳ ಅವಕಾಶವನ್ನು ಕಲ್ಪಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅಧಿಸೂಚನೆ ಸಂಖ್ಯೆ ಎಫ್:ಡಿ:07:5, ದಿನಾಂಕ 28.09.2004 ರಲ್ಲಿ "ಕವಿನಿಅ( ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗೆ ಸಂಬಂಧಿಸಿ ಲೈಸೆನ್ಸುದಾರರ ಕರ್ತವ್ಯ) "ನಿಯಮಗಳು, 2004 ಯನ್ನು ಪ್ರಕಟಿಸಿ, ಇದನ್ನು ದಿನಾಂಕ 21.10.2004ರ ಕರ್ನಾಟಕ ರಾಜ್ಯ ಪತ್ರದ ಭಾಗ–3ರಲ್ಲಿ(ಪುಟ ಸಂಖ್ಯೆ 1867ರಿಂದ 1869) ಪ್ರಕಟಪಡಿಸಿದೆ.

ಕವಿನಿಅ( ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗೆ ಸಂಬಂಧಿಸಿ ಲೈಸೆನ್ಸುದಾರರ ಕರ್ತವ್ಯ) ವಿನಿಯಮಗಳು, 2004 ನ್ನು ಅಂಗೀಕರಿಸುವುದರೊಂದಿಗೆ, ಕೆಳಗೆ ಸೂಚಿಸಿರುವ ಕ.ವಿ.ನಿ.ಅ(ವಿದ್ಯುತ್ ಸರಬರಾಜು ಮತ್ತು ವಿತರಣೆ) ಸಂಹಿತೆ 2000-01 ರ ಷರತ್ತುಗಳು ಮತ್ತಷ್ಟು ಸದೃಢಗೊಂಡಿವೆ.

ಎ) 4.01(ii)

ಬಿ) 4.02(ಎ) ಮತ್ತು (ಬಿ)

ಸಿ) 4.05 (iv)ರಿಂದ (vii)ವರೆಗೆ

ಡಿ) 4.11(i)

ಇ) 5.01(ಡಿ) ಮತ್ತು (ಎಫ್)

### ತಿದ್ದುಪಡಿ

ವಿದ್ಯುಚ್ಛಕ್ತಿ ಅಧಿನಿಯಮ 2003(2003ರ ಕೇಂದ್ರ ಕಾಯಿದೆ 36)ರ ಪರಿಚ್ಛೇದ 181ರ ಉಪ ಪರಿಚ್ಛೇದ (2) ರ ಖಂಡ (ಟಿ) ಮೂಲಕ ದತ್ತವಾದ ಅಧಿಕಾರ ಹಾಗೂ ಪರಿಚ್ಛೇದ 43ರ ಉಪ ಪರಿಚ್ಛೇದ (1)ರ ಅನುಸರಣೆಯಾಗಿ, ಹಾಗೂ ಇದರ ಪರವಾಗಿ ಎಲ್ಲ ಅಧಿಕಾರಗಳ ಅವಕಾಶವನ್ನು ಕಲ್ಪಿಸಿ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ಕವಿನಿಅ( ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗೆ ಸಂಬಂಧಿಸಿ ಲೈಸೆನ್ಸುದಾರರ ಕರ್ತವ್ಯ) ವಿನಿಯಮಗಳು, 2004 ಯನ್ನು ತಿದ್ದುಪಡಿಗೊಳಿಸಲು ಕೆಳಕಂಡ ವಿನಿಯಮಗಳನ್ನು ರೂಪಿಸಿದೆ:

I. ಶೀರ್ಷಿಕೆ ಹಾಗೂ ಪ್ರಾರಂಭ :

ಎ) ಈ ವಿನಿಯಮಗಳನ್ನು ಕವಿನಿಅ( ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗೆ ಸಂಬಂಧಿಸಿ ಲೈಸೆನ್ಸುದಾರರ ಕರ್ತವ್ಯ) ವಿನಿಯಮಗಳು, 2005 ಎಂದು ಹೆಸರಿಸಲಾಗಿದೆ.

ಬಿ) ಈ ವಿನಿಯಮಗಳು ಮತ್ತೆ ತಿದ್ದುಪಡಿಗೊಳ್ಳದ ಹೊರತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

ಸಿ) ಈ ವಿನಿಯಮಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

II. ಕವಿನಿಅ( ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜಿಗೆ ಸಂಬಂಧಿಸಿ ಲೈಸೆನ್ಸುದಾರರ ಕರ್ತವ್ಯ) ವಿನಿಯಮಗಳು, 2004 ಕ್ಕೆ ತಿದ್ದುಪಡಿಗಳು. ಅಂಕಣ 3ರಲ್ಲಿನ ವಿನಿಯಮಗಳು ಪ್ರಸಕ್ತವಾದದ್ದಾಗಿದ್ದು, ಇವುಗಳನ್ನು ಅಂಕಣ 4ರಲ್ಲಿ ತಿಳಿಸಿರುವ ವಿನಿಯಮಗಳಿಂದ ಬದಲಾಯಿಸಲಾಗಿದೆ.

| ಕ್ರಮ ಸಂಖ್ಯೆ | ಪರಿಚ್ಛೇದ ಸಂಖ್ಯೆ | ಪ್ರಸಕ್ತದ ವಿನಿಯಮಗಳು | ತಿದ್ದುಪಡಿಗೊಳಿಸಿರುವುದು |
|---|---|---|---|
| 1 | 1(ಬಿ) | ಕಿರು ಶೀರ್ಷಿಕೆ, ಪ್ರಾರಂಭ ಮತ್ತು ಆಚರಣೆ<br>ಆಯೋಗವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬಹುದಾದ ದಿನದಿಂದ ಜಾರಿಗೆ ಬರುತ್ತವೆ. | ಕಿರು ಶೀರ್ಷಿಕೆ, ಪ್ರಾರಂಭ ಮತ್ತು ಆಚರಣೆ<br>ವಿನಿಯಮಗಳು ಅನ್ಯಥಾ ತಿದ್ದುಪಡಿಗೊಳ್ಳದ ಹೊರತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ. |
| 2 | 6 | ಬಳಕೆ :ಈ ವಿನಿಯಮಗಳಲ್ಲಿ ಒಳಗೊಂಡಿರುವ ಯಾವುದೇ ಅಂಶಗಳಾಗಲೀ, ಗ್ರಾಹಕ ಹಿತಾಸಕ್ತಿ ಅಧಿನಿಯಮ, 1986(1986ರ 68)ನ್ನೊ ಒಳಗೊಂಡಂತೆ ಪ್ರಸಕ್ತ ಜಾರಿಯಲ್ಲಿರುವ ಯಾವುದೇ ಇನ್ನಿತರ ಕಾನೂನಿನ ಅಡಿಯಲ್ಲಿ ತಿಳಿಸಿರುವ ಗ್ರಾಹಕರ ಹಕ್ಕು ಮತ್ತು ಸೌಕರ್ಯಗಳ ಮೇಲೆ ಪರಿಣಾಮ ಬೀರತಕ್ಕದ್ದಲ್ಲ. | ರದ್ದುಗೊಳಿಸುವಿಕೆ ಹಾಗೂ ಬಳಕೆ:<br>1) ಈ ವಿನಿಯಮಗಳೊಂದಿಗೆ ಯಾವುದೇ ರೀತಿಯಲ್ಲಾಗಲೀ ಹೊಂದಾಣಿಕೆಯಾಗದ ಅಥವಾ ಸಮಂಜಸವಾಗದ ಕವಿನಿಆಯೋಗ (ವಿದ್ಯುತ್ ಸರಬರಾಜು ಮತ್ತು ವಿತರಣೆ) ಸಂಹಿತೆ 2000-01ರ ಷರತ್ತುಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ತಿದ್ದುಪಡಿಗೊಳಿಸಿದ ದಿನಾಂಕದಿಂದ ಹೊಂದಾಣಿಕೆ ಆಗದ ಅಥವಾ ಸಮಂಜಸವಾಗದಷ್ಟರ ಮಟ್ಟಿಗೆ ರದ್ದುಗೊಂಡಿವೆ.<br>2) ಉಪ ಖಂಡ-1ರ ಸರ್ವಸಾಮಾನ್ಯತೆಗೆ ಪಕ್ಷಪಾತವಿಲ್ಲದೆ, ಕೆಳಗೆ ಸೂಚಿಸಿರುವ ಕವಿನಿಆ(ವಿದ್ಯುತ್ ಸರಬರಾಜು ಮತ್ತು ವಿತರಣೆ) ಸಂಹಿತೆ, 000-01ರ ಷರತ್ತುಗಳು ರದ್ದುಗೊಂಡಿವೆ.<br>ಎ) 4.01(ii)<br>ಬಿ) 4.02(ಎ) ಮತ್ತು (ಬಿ)<br>ಸಿ) 4.05 (iv)ರಿಂದ (vii)ವರೆಗೆ<br>ಡಿ) 4.11(i)ಇ) 5.01(ಡಿ) ಮತ್ತು (ಎಫ್)<br>3) ಈ ವಿನಿಯಮಗಳಲ್ಲಿ ಒಳಗೊಂಡಿರುವ ಯಾವುದೇ ಅಂಶಗಳಾಗಲೀ, ಗ್ರಾಹಕ ಹಿತಾಸಕ್ತಿ ಅಧಿನಿಯಮ, 1986(1986ರ 68)ನ್ನೊ ಒಳಗೊಂಡಂತೆ ಪ್ರಸಕ್ತ ಜಾರಿಯಲ್ಲಿರುವ ಯಾವುದೇ ಇನ್ನಿತರ ಕಾನೂನಿನ ಅಡಿಯಲ್ಲಿ ತಿಳಿಸಿರುವ ಗ್ರಾಹಕರ ಹಕ್ಕು ಮತ್ತು ಸೌಕರ್ಯಗಳ ಮೇಲೆ ಪರಿಣಾಮ ಬೀರತಕ್ಕದ್ದಲ್ಲ. |

ಆಯೋಗದ ಆದೇಶದಂತೆ,

ಸಹಿ
ಕಾರ್ಯದರ್ಶಿ,
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ